ಬೈಕಿನಾತನು ಕಾರಿನ ಸಮೀಪಕ್ಕೆ ಸರಿಯುತ್ತಿರುವ ನಡುವೆ ತಲೆಯಲ್ಲಿದ್ದ ಹೆಲ್ಮೆಟು ಕಳಚಿದ. ಆ ಹೊತ್ತಿನಲ್ಲಿ, ಅವನ ಕಟ್ಟುಮುಡಿಯ ಇಳಿಬಾಲವು ಹೆಲ್ಮೆಟಿಗೆ ತೊಡರಿತೇನೋ... ತನ್ನಿಂತಾನೇ ಬಿಚ್ಚಿ, ಅವನ ಹುಲುಸಾದ ಹಿಂಗುರುಳು ಇದ್ದಕ್ಕಿದ್ದಂತೆ ತೀಡಿಬಂದ ಜೋರುಗಾಳಿಗೆ ಸಿಲುಕಿ ದಿಕ್ಕುದಿಕ್ಕಿಗೂ ಚದುರಿ ಹಾರಿತು. 'ಓಹ್ ಫಕ್ಕ್... ಧ್ರುವ...' ಒಮ್ಮೆಗೇ ನನ್ನೊಳಗಿನಿಂದ ಉದ್ಗಾರ ಹೊಮ್ಮಿತು. ಮರುಗಳಿಗೆಗೆಲ್ಲ, 'ಸದಾ ಚಾಕು ಇಟ್ಟುಕೊಂಡಿರುತಾನೆ, ಪರಿಧಿ ಸರ್... ಏನೋ ನೆಪಮಾಡಿ ಅವನ ಬ್ಯಾಕ್–ಪ್ಯಾಕ್ ತೆಗೆಸಿದೆ. ಕನ್ಫರ್ಮ್ಾಗಿ ಹೋಯಿತು...' ಎಂದು ಸಲಿಲೆ ಹೇಳಿದ್ದು ನೆನಪಾಗಿ ನನ್ನ ಮೈಯುದ್ದಕ್ಕೂ ಕಂಪನವೇರ್ಪಟ್ಟಿತು. ಅಡ್ರಿನಾಲಿನ್ ರಶ್ ಅನ್ನುತಾರಲ್ಲ–ಅದು ನನ್ನೊಳಗೆಲ್ಲ ಘಟಿಸಿತು.

ಮರುಕ್ಷಣಕ್ಕೆಲ್ಲ ಧ್ರುವ ನನ್ನ ಬಲಬದಿಯ ಗಾಜಿನಾಚೆ ಬಂದುನಿಂತ. ಧಂಡಿಧಂಡಿ ವಿನಯವಿದ್ದ ನಮಸ್ಕಾರ ಹೇಳಿದನೆಂದು ಮೈದುಟಿಗಳ ಚಲನವಲನದಿಂದ ಗೊತ್ತಾಯಿತೇ ವಿನಃ ನಿಜವಾಗಿ ಕೇಳಿಸಿ ಬರಲಿಲ್ಲ. ನನ್ನನ್ನು ಕವಿದಿದ್ದ ಗಾಜು ಅವನನ್ನು ಸಾಕಷ್ಟು ಹೊರಗಿಟ್ಟಿತ್ತು. ಓಹ್ ಗ್ಗಾಷ್... ನಾನು ತೀರಾ ಅಂದರೆ ತೀರಾ ಹೆದರಿಹೋಗಿದ್ದೆ. ಹೊರಗಿನಿಂದ ಕಂಪಿಸುವ ಮೈಯಿ ನನ್ನ ಗುಂಡಿಗೆಯ ಒಳಗನ್ನೂ ಅದುರಿಸಿಟ್ಟಿತ್ತೇನೋ... ಇಷ್ಟಿದ್ದೂ, ಪುಣ್ಯವಶಾತ್ ನನ್ನೊಳಗೇನೋ ಎಚ್ಚೆತ್ತುಕೊಂಡಿತ್ತು. ನನ್ನಿಂದ ಗಾಜಿನಾಚೆಗಿದ್ದಾತನಿಗೆ ಫೋನು ಮಾಡಿಸಿತು. 'ಧ್ರೂ, ಇಲ್ಲಿ ನಿಲ್ಲಿಸೋದು ಬೇಡ ಕಣೋ... ಕಾರಿನಲ್ಲಿ ಸಣ್ಣ ಪ್ರಾಬ್ಲಮ್ಮಿದೆ. ನಿಂತರೆ ಸ್ಟಾರ್ಟಾಗೋದು ಕಷ್ಟ. ಮೇನ್ ರೋಡಿನವರೆಗೂ ನನ್ನ ಫಾಲೋ ಮಾಡು...' ಎಂಬ ಸುಳ್ಳು ಹೊಸೆಯಿಸಿತು. 'ಯೆಸ್ಸರ್... ಆದರೆ, ನಿಮ್ಮನ್ನ ಏನೇ ಆದರೂ ನಾನಿವೊತ್ತು ಮಾತಾಡಿಸಲೇಬೇಕು. ನನ್ನ ಉಳಿವಳಿವಿನ ಪ್ರಶ್ನೆ. ಪ್ಲೀಸ್ ಸರ್... ಡೋಂಟ್ ಡಿನೈ... ಪ್ಲೀಸ್...' ಧ್ರುವ ಗೋಗರೆದು ಹೇಳಿದ. ಅವನು ಮಾತು ಮುಗಿಸುವ ಮುನ್ನವೇ ಫೋನು ಕಡಿದೆ.

ಹೆದ್ದಾರಿಯನ್ನು ತಲುಪಿದ್ದೇ ಎಡಗಡೆಗೆ ಸಿಗುವ ಮೊಟ್ಟಮೊದಲ ಕೆಫೆ ಹೊಕ್ಕು ಧ್ರುವನನ್ನು ಎದುರಿಟ್ಟುಕೊಂಡು ಕುಳಿತೆ. ಬೀದಿಗೆ ಕಾಣಿಸುವ ಹಾಗೆ ಕೆಫೆಯ ಮುಂಗಾಜಿನ ಬದಿಗಿದ್ದು, ಸುತ್ತಮುತ್ತ ಸಾಕಷ್ಟು ಜನರಿದ್ದ ಮೇಜನ್ನು ಬೇಕುಬೇಕೆಂದು ಆಯ್ದುಕೊಂಡೆ. ತರುವಾಯ, ಒಡನಿದ್ದವನು ಏನು ಕುಡಿದಾನೆಂದು ಸಹ ವಿಚಾರಿಸದೆ ಕೌಂಟರಿನಲ್ಲಿ ಹಣತೆತ್ತು ಎರಡು ಕೆಪಾಚಿನೋ ಇಸಕೊಂಡು ವಾಪಸಾದೆ. ಒಂದನ್ನು ಎದುರಾತನಿಗಿತ್ತು ಇನ್ನೊಂದನ್ನು ತುಟಿಗೇರಿಸುವಾಗಲೂ, ಇವನ ಕೋರಿಕೆಯನ್ನು ಮನ್ನಿಸಬಾರದಿತ್ತೆಂದು ನನ್ನ ಮನಸ್ಸು ಪದೇಪದೇ ಬುದ್ಧಿಹೇಳಿತು. ಎಚ್ಚರ... ಜಾಗ್ರತೆ.. ಜೋಕೆ... ಎಂದೆಲ್ಲ ಸಾರಿ ಸಾರಿ ತಿಳಿಹೇಳಿತು.

'ಪ್ಲೀಸ್ ಹ್ಯಾವಿಟ್, ಧ್ರೂ...' ನಾನು ಎರಡನೇ ಗುಟುಕಿಗೆ ತೊಡಗುವಾಗಲೂ ಧ್ರುವನು ಕಾಫೀಮಗ್ಗಿಗೆ ಕೈಯಿಕ್ಕದ್ದನ್ನು ಕಂಡು ಹೇಳಿದೆ. ಗಡಿಬಿಡಿಯಲ್ಲಿ ಕೆಫೆಯ ಹೆಸರೇನೆಂದು ಸಹ ಗಮನಿಸಿದ್ದಿರದ ನಾನು, ಈವಾಗ, ಸಾವಕಾಶವಾಗಿ ಒಪ್ಪವಾದ ಒಳಾಂಗಣವನ್ನು ಗಮನಿಸಿ 'ತರ್ಡ್–ವೇವ್' ಎಂಬುದನ್ನು ನನ್ನನಗೇ ಹೇಳಿಕೊಂಡೆ.



ಒತ್ತಾಯದಿಂದ ಕಾಫೀಮಗ್ಗಿನಲ್ಲಿ ತೊಡಗಿದ ಧ್ರುವನ ಕೈಯಿ ಸಣ್ಣಗೆ ಕಂಪಿಸಿದ್ದು ಢಾಳಾಗಿ ತೋರಿಬಂತು. 'ಟೆಲ್ಮೀ ನವ್, ಧ್ರೂ...' ಅವನು ಮೊದಲ ಗುಟುಕಿಳಿಸುವುದನ್ನೇ ಕೇಳಿದೆ. ಹುಡುಗ ಉತ್ತರಿಸಲಿಲ್ಲ. ಗಳಿಗೆಗಳು ಕಳೆದರೂ ಅವನು ತುಟಿ ತೆರೆಯಲಿಲ್ಲ. ಅವನೊಳಗೊಂದು ಪ್ರಕ್ಷುಬ್ಧ ಕಡಲು ಮೊರೆಯುತ್ತಿದೆಯೆಂದು ಅನ್ನಿಸಿಬಂತು. ಒಳಗಿನ ಹೇಳಿಕೆಯಷ್ಟೂ ಹೊರಬರಲೊಲ್ಲದೆ ಗಂಟಲೊಳಗೇ ಇದ್ದುಬಿಡುವ ಹಟಕ್ಕೆ ತೊಡಗಿರುವುದು ಸಾಫುಸಾಫು ಗೊತ್ತಾಯಿತು. ಈ ನಡುವೊಮ್ಮೆ ನೇರ